# ಕರ್ನಾಟಕ ವಿಧಾನ ಪರಿಷತ್ತಿನ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 824 (1103) |
| ಸದಸ್ಯರ ಹೆಸರು | ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 28.12.2022 |
| ಉತ್ತರಿಸಬೇಕಾದವರು | ಮಾನ್ಯ ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಂದಾಯ ಇಲಾಖೆಯಲ್ಲಿ ವಿವಿಧ ವರ್ಗದ ಹುದ್ದೆಗಳಾದ ಉಪತಹಶೀಲ್ದಾರ್, ಗ್ರಾಮ ಲೆಕ್ಕಿಗರು ಹಾಗೂ ಪ್ರಥಮ, ದ್ವಿತೀಯ ದರ್ಜೆ ಸಹಾಯಕರು ಹಾಗೂ ಕಂಪ್ಯೂಟರ್ ಆಪರೇಟರ್ ಹಾಗೂ ಇತರೆ ಎಷ್ಟು ಹುದ್ದೆಗಳು ಖಾಲಿ ಇವೆ ; | (see table below) |
| ಆ | ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಂದ ಸಾರ್ವಜನಿಕರ ಕೆಲಸ ಕಾರ್ಯಗಳು ಕುಂಠಿತವಾಗಿರುವುದರಿಂದ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕ್ರಮವನ್ನು ಕೈಗೊಂಡಿದೆ? | "ಸಿ" ವೃಂದದ ಶಿರಸ್ತೇದಾರ್ / ಉಪತಹಶೀಲ್ದಾರ್ / ಶೀಘ್ರಲಿಪಿಗಾರರ ಹುದ್ದೆಗಳ ನೇಮಕಾತಿ ಪ್ರಾಧಿಕಾರ ಪ್ರಾದೇಶಿಕ ಆಯುಕ್ತರಾಗಿದ್ದು, ಶಿರಸ್ತೇದಾರ್ ವೃಂದದ ಹುದ್ದೆಗಳನ್ನು ಮುಂಬಡ್ತಿ ಮೂಲಕ ಹಾಗೂ ಶೀಘ್ರಲಿಪಿಗಾರರ ಹುದ್ದೆಗಳನ್ನು ಶೇ.67 ರಷ್ಟು ನೇರ ನೇಮಕಾತಿ ಮೂಲಕ ಹಾಗೂ ಶೇ.33 ರಷ್ಟು ಬಡ್ತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. ಇನ್ನುಳಿದ "ಸಿ" ವೃಂದದ ಹುದ್ದೆಗಳಿಗೆ ಜಿಲ್ಲಾಧಿಕಾರಿಗಳು ನೇಮಕ ಪ್ರಾಧಿಕಾರಿಯಾಗಿದ್ದು ಅದರಲ್ಲಿ ಪ್ರ.ದ.ಸ & ದ್ವಿ.ದ.ಸ ಖಾಲಿ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ಮತ್ತು ಮುಂಬಡ್ತಿ ಮೂಲಕ ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಕಾಲ ಕಾಲಕ್ಕೆ ಭರ್ತಿ ಮಾಡಲಾಗುತ್ತಿದೆ. |

Answer (ಅ):

| ಹುದ್ದೆಯ ಹೆಸರು | ಖಾಲಿ ಹುದ್ದೆ ವಿವರ |
|---|---|
| ಉಪ ತಹಶೀಲ್ದಾರ್/ಶಿರಸ್ತೇದಾರ್ | 155 |
| ಪ್ರ.ದ.ಸ / ಕಂ ನಿ | 172 |
| ದ್ವಿ.ದ.ಸ | 820 |
| ಗ್ರಾಮ ಲೆಕ್ಕಾಧಿಕಾರಿ | 2,055 |
| ಶೀಘ್ರಲಿಪಿಗಾರರು | 87 |
| ಬೆರಳಚ್ಚುಗಾರರು [ಕಂಪ್ಯೂಟರ್ ಆಪರೇಟರ್] | 598 |
| ವಾಹನ ಚಾಲಕರು | 281 |
| ಗ್ರೂಪ್-ಡಿ | 1,305 |
| ಒಟ್ಟು | 5,473 |

| | | |
|---|---|---|
| | | ಉಳಿದಂತೆ ಗ್ರಾಮ ಆಡಳಿತ ಅಧಿಕಾರಿ (ಗ್ರಾಮ ಲೆಕ್ಕಿಗರು) ಹುದ್ದೆಗಳನ್ನು ನೇಮಕಾತಿ ಮಾಡುವ ವಿಧಾನವನ್ನು ಬದಲಾವಣೆ ಮಾಡುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ನಿಯಮಾನುಸಾರ ಕ್ರಮವಹಿಸಲಾಗುವುದು.<br><br>ಬೆರಳಚ್ಚುಗಾರರು, ವಾಹನ ಚಾಲಕರು ಮತ್ತು ಗ್ರೂಪ್-ಡಿ ಹುದ್ದೆಗಳನ್ನು ಆರ್ಥಿಕ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ: ಆಇ 06 ಟಿಎಫ್‌ಪಿ 2018, ದಿನಾಂಕ:22.03.2019 ರನ್ವಯ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. |

**ಇ-ಕಂಇ 345 ಬಿಎಂಎಂ 2022**

(ಆರ್.ಅಶೋಕ)
ಕಂದಾಯ ಸಚಿವರು